# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 41 (52) |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಜಿಲ್ಲಾಧಿಕಾರಿಗಳಿಂದ ನೇಮಕಗೊಂಡು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನವೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಜಿಲ್ಲಾಧಿಕಾರಿಗಳಿಂದ ನೇಮಕಗೊಂಡ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳಿಗೆ ನೀಡುತ್ತಿರುವ ಕನ್ಸಲ್ಟನ್ಸಿ ಫೀ ವಿವರವನ್ನು ಅನುಬಂಧ-1 ರಲ್ಲಿರಿಸಿದೆ. |
| (ಆ) | ರಾಜ್ಯದ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಸುಮಾರು 10 ರಿಂದ 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳಿಗೆ ಸೇವಾ ಭದ್ರತೆ ಇಲ್ಲದೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಿಬ್ಬಂದಿಗಳಿಗೆ ಯಾವ ಕಾಲಮಿತಿಯಲ್ಲಿ ಸೇವಾ ಭದ್ರತೆ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನ್ಸಲ್ಟೆನ್ಸಿ ಗುತ್ತಿಗೆಯಡಿ ಕರ್ತವ್ಯನಿರ್ವಹಿಸುತ್ತಿರುವ ನೋಡಲ್ ಅಧಿಕಾರಿ, ಸೀನಿಯರ್ ಪ್ರೋಗ್ರಾಮರ್ ಮತ್ತು ಜೂನಿಯರ್ ಪ್ರೋಗ್ರಾಮರ್‌ಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸೌಲಭ್ಯ ಕಲ್ಪಿಸುವ ಕುರಿತಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ:17.03.2026ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ. |
| (ಇ) | ರಾಜ್ಯದ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಸುಮಾರು ವರ್ಷದಿಂದ ಕಾರ್ಯನಿರ್ವಹಿಸುತ್ತಾ ಬಂದಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳಲ್ಲಿ ಅಕಾಲಿಕ ಮರಣ ಹೊಂದಿ ಎಷ್ಟು ಕುಟುಂಬಗಳು ಬೀದಿ ಪಾಲಾಗಿದೆ; ಬೀದಿ ಪಾಲಾಗಿರುವ ಕುಟುಂಬಕ್ಕೆ ನ್ಯಾಯ ದೊರೆಯುವುದು ಯಾವಾಗ ಮತ್ತು ಇದಕ್ಕೆ ಯಾರು ಹೊಣೆ (ವಿವರ ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನ್ಸಲ್ಟನ್ಸಿ ಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್‌ಗಳು ಮರಣ ಹೊಂದಿದ ವಿವರವನ್ನು ಅನುಬಂಧ-2 ರಲ್ಲಿರಿಸಿದೆ. |
| (ಈ) | ದಿನಾಂಕ:24.03.2023 ರಂದು ನಡೆದ ಸಚಿವ ಸಂಪುಟದಲ್ಲಿ ನಿರ್ಣಯಿಸಿದಂತೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಜಿಲ್ಲಾಧಿಕಾರಿಗಳಿಂದ ನೇಮಕಗೊಂಡು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳಿಗೆ ಶೇ.5% ರಷ್ಟು ವೇತನವನ್ನು ಹೆಚ್ಚಿಗೆ | ಸರ್ಕಾರದ ಪತ್ರ ಸಂಖ್ಯೆ: ನಅಇ 64 ಇಎಂಸಿ 2022, ದಿನಾಂಕ: 08.04.2025 ರಲ್ಲಿ ದಿನಾಂಕ: 24.03.2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ.<br>*"ರಾಜ್ಯದ ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನ್ಸಲ್ಟೆನ್ಸಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಮಾಹಿತಿ ತಂತ್ರಜ್ಞಾನ ಸಿಬ್ಬಂದಿಗಳ ಗುತ್ತಿಗೆ ಅವಧಿಯು ದಿನಾಂಕ:02.04.2023 ರಿಂದ* |

| | | |
|---|---|---|
| | ಮಾಡಿದರೂ ಸಹಿತ ಕನಿಷ್ಠ/ಸಮಾನ ವೇತನಕ್ಕೆ ಸರಿ ಸಮಾನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಿಬ್ಬಂದಿಗಳಿಗೆ ಯಾವಾಗ ಕನಿಷ್ಠ/ಸಮಾನ ವೇತನ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | *ಅನ್ವಯವಾಗುವಂತೆ ಪ್ರತಿ 11 ತಿಂಗಳ ನಂತರ ಒಂದು ದಿನ ಕಡಿತಗೊಳಿಸಿ ಮೂರು ವರ್ಷಗಳವರೆಗೆ ಅವರುಗಳು ಪ್ರಸ್ತುತ ಪಡೆಯುತ್ತಿರುವ ಕನ್ಸಲ್ಟೆನ್ಸಿ ಫೀಗೆ ಅನುಗುಣವಾಗಿ ಶೇ.5 ರಷ್ಟನ್ನು ಹೆಚ್ಚಿಸಿ ಮುಂದುವರೆಸಲು ಹಾಗೂ ಮುಂದುವರೆಸುವಾಗ ಮೂರು ವರ್ಷಗಳ ಅವಧಿ ಪೂರೈಸುವ ಅವಧಿಯೊಳಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಕಾರ್ಯವರದಿ ಪಡೆದು, ಪರಿಶೀಲಿಸಿ, ಕಾರ್ಯಕ್ಷಮತೆ ತೃಪ್ತಿಕರವಾಗಿಲ್ಲದಿದ್ದಲ್ಲಿ ಅವರುಗಳ ಗುತ್ತಿಗೆ ಅವಧಿಯನ್ನು ಮುಕ್ತಾಯಗೊಳಿಸಿ, ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಆ ಹುದ್ದೆಗೆ ಹೊಸಬರನ್ನು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ನಿರ್ಣಯವಾಗಿರುತ್ತದೆ".*<br><br>ದಿನಾಂಕ: 26.05.2025 ರಂದು ನಡೆದ 24 ನೇ ಗವರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್‌ಗಳಿಗೆ ಕಾರ್ಮಿಕ ಇಲಾಖೆಯು "ಕಟ್ಟಡ ಮತ್ತು ಇತರೆ ಕಾಮಗಾರಿಗಳಲ್ಲಿನ ಉದ್ಯೋಗ" ಉದ್ದಿಮೆಯಲ್ಲಿ ಕೆಲಸ ಮಾಡುವ Diploma in Engineering Employee ಗಳಿಗೆ ನಿಗಧಿಪಡಿಸಿದ ಕನಿಷ್ಠ ವೇತನವನ್ನು (ರೂ.27,114/-) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನಿಷ್ಠ ವೇತನಕ್ಕಿಂತ ಕಡಿಮೆ ಕನ್ಸಲ್ಟೆನ್ಸಿ ಫೀ ಪಡೆಯುತ್ತಿರುವ ಗುತ್ತಿಗೆ ಜೂನಿಯರ್ ಪ್ರೋಗ್ರಾಮರ್‌ಗಳಿಗೆ ನಿಗಧಿಪಡಿಸಲು ತೀರ್ಮಾನಿಸಲಾಗಿರುತ್ತದೆ.<br><br>ಅದರಂತೆ, ಈ ಕಛೇರಿಯ ಅಧಿಕೃತ ಜ್ಞಾಪನ ದಿನಾಂಕ: 25.11.2025 ರಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಡಿ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್‌ಗಳ ಕನ್ಸಲ್ಟೆನ್ಸಿ ಫೀಯನ್ನು "ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಠ ವೇತನಕ್ಕಿಂತ ಕಡಿಮೆ ಕನ್ಸಲ್ಟೆನ್ಸಿ ಫೀ ಪಡೆಯುತ್ತಿರುವ ಗುತ್ತಿಗೆ ಆಧಾರದಡಿ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಗಳಿಗೆ ಮಾಹೆಯಾನ ರೂ.27,114/- ಗಳನ್ನು ಕನ್ಸಲ್ಟೆನ್ಸಿ ಫೀಯಾಗಿ ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ. |
| (ಉ) | ರಾಜ್ಯದ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಸುಮಾರು 10 ರಿಂದ 15 ವರ್ಷದವರೆಗೆ ಕಾರ್ಯನಿರ್ವಹಿಸುತ್ತಾ ಬಂದಿರುವ ಜೂನಿಯರ್ ಪ್ರೋಗ್ರಾಮರ್ ಸಿಬ್ಬಂದಿಗಳು ಹಾಗೂ ಅವರ ಅವಲಂಬಿತ ಕುಟುಂಬದವರಿಗೆ ಯಾವುದೇ ಅಹಿತಕರ ಘಟನೆಯಾದ್ದಲ್ಲಿ ಸರ್ಕಾರವು ಇವರಿಗೆ ನೀಡುವ ಸೌಲಭ್ಯಗಳು ಏನು; ಇಲ್ಲದಿದ್ದಲ್ಲಿ, ಇವರಿಗೆ ಗುತ್ತಿಗೆ ಎಂದು ಹೇಳಿ ಜೀತ ಪದ್ಧತಿಯಲ್ಲಿ ದುಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕನ್ಸಲ್ಟೆನ್ಸಿ ಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಗಳಿಗೆ ಮುನಿಸಿಪಲ್ ನಿಧಿಯಿಂದ ಸಮಾಲೋಚಕರ ಶುಲ್ಕ (ಕನ್ಸಲ್ಟೆನ್ಸಿ ಫೀ) ಪಾವತಿಸಲಾಗುತ್ತಿರುವುದರಿಂದ, ಇನ್ನಿತರ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ. |

**ಸಂಖ್ಯೆ:** ನಅಇ 28 ಎಲ್‌ಸಿಕ್ಯೂ 2025(ಭಾ-2)

(**ರಹೀಂ ಖಾನ್**)
ಪೌರಾಡಳಿತ ಮತ್ತು ಹಜ್ ಸಚಿವರು